# ನಮ್ಮ ಸಂಘದ ಕಥೆ

ಪ್ರಿನ್ಸಿಪಲ್ ಬಿ. ಎಸ್. ಮಾಧವರಾವ್
ಅವರ ಸಮಕ್ಷಮಕ್ಕೆ

ಇದು
ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಮಧ್ಯೆ
ನಾವು ನಡಸಿರುವ
ಒಂದು ರಚನಾತ್ಮಕವಾದ ಕಾರ್ಯದ ವರದಿ.
ಈ ಕಾರ್ಯದಲ್ಲಿ ಸಹಾನುಭೂತಿ ಉಳ್ಳವರು
ನಮ್ಮ ಸಂಘದ ಪ್ರಕಟನೆಗಳನ್ನು ಕೊಂಡು,
ನಮ್ಮ ಕಾರ್ಯಕ್ಕೆ ನೆರವಾಗಬಹುದು.
ನಮ್ಮ ಪ್ರಕಟನೆಗಳ ಪಟ್ಟಿ ಕೊನೆಯ ಪುಟದಲ್ಲಿದೆ.

ಇತಿ ವಿಜ್ಞಾಪನೆಗಳು.

ರಾಜರತ್ನಂ
16.11.54

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು.

# ನಮ್ಮ ಸಂಘದ ಕಥೆ

## (1948—1954)

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಕಳೆದ ಮೂವತ್ತಾರು ವರ್ಷಗಳಿಂದ ಅವಿಚ್ಛಿನ್ನವಾಗಿ ತಾನು ತನಗೆ ನಿಯಮಿಸಿಕೊಂಡ ಕರ್ತವ್ಯಗಳನ್ನು ತನ್ನ ಕೈಲಾದಮಟ್ಟಿಗೆ ನಡಸಿಕೊಂಡು ಬರುತ್ತಿದೆ. ಈ ನಿರಂತರ ಕಥೆಯ ಸ್ಥೂಲ ಸ್ವರೂಪವಾದರೂ ನಮ್ಮ ಸಂಘದ ಹೊಸ ಸದಸ್ಯರಿಗೆ ಆಗಬೇಕೆಂಬ ಉದ್ದೇಶದಿಂದ ಈ ಕಥಾರೂಪವಾದ ವರದಿಯನ್ನು ಇಲ್ಲಿ ಬರೆಯುತ್ತಿದ್ದೇನೆ. ಅಲ್ಲದೆ, ಈಚಿನ ಆರು ವರ್ಷಗಳಲ್ಲಿ, ಸಂಘದಿಂದ ಕೆಲವು ಸ್ವಾತಂತ್ರ್ಯಗಳನ್ನು ಪಡೆದು, ಅದನ್ನು ಸಂಘಕ್ಕಾಗಿ ಹೇಗೆ ಬಳಸಿಕೊಂಡಿರುವೆನೆಂಬುದನ್ನೂ ಶ್ರುತಪಡಿಸಲು ಇದನ್ನು ಬರೆಯುತ್ತಿದ್ದೇನೆ.

### ಮೊದಲಿನ ಮೂವತ್ತು ವರುಷ

ನಮ್ಮ ಸಂಘ ಸ್ಥಾಪನೆಯಾದದ್ದು 1918ನೇ ಇಸವಿಯ ಆಗಸ್ಟ್ ತಿಂಗಳಲ್ಲಿ. ಆಗ ಈ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರೀ ಅವರು ತಮ್ಮ ವಿದ್ಯಾರ್ಥಿಗಳೊಡನೆ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಈ ಸಂಘವನ್ನು ಸ್ಥಾಪಿಸಿದರು. ಅಲ್ಲಿಂದ ಮುಂದೆ 1938ರ ವರೆಗೂ, ಎಂದರೆ ಇಪ್ಪತ್ತು ವರ್ಷಗಳ ಕಾಲ, ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳೂ ಇವರಂತೆಯೇ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ ಅವರೂ ಈ ಸಂಘವನ್ನು ತಮ್ಮ ವಿದ್ಯಾರ್ಥಿಗಳೊಡನೆ ಲಾಲಿಸಿ, ಪಾಲಿಸಿ, ಬೆಳಸಿಕೊಂಡು ಬಂದರು. ಅನಂತರ ಮುಂದಿನ ಹತ್ತು ವರ್ಷಗಳಲ್ಲಿ ಶ್ರೀಯುತರುಗಳಾದ ಕೆ. ವೆಂಕಟರಾಮಪ್ಪ, ವಿ. ಸೀತಾರಾಮಯ್ಯ, ಕೆ. ವಿ. ಪುಟ್ಟಪ್ಪ, ಎಲ್. ಗುಂಡಪ್ಪ, ಡಿ. ಎಲ್. ನರಸಿಂಹಾಚಾರ್ ಇವರುಗಳು ಇಲ್ಲಿಗೆ ಅಧ್ಯಾಪಕರಾಗಿ ಬಂದಾಗ, ಸಂಘದ ಸಂಪ್ರದಾಯವನ್ನು ಮುಂದುವರಿಸಿ, ಸಂಘದ ಹಣಕಾಸಿನ ಸ್ಥಿತಿಗತಿಗಳನ್ನು ಆರೋಗ್ಯವಾಗಿ ನಡಸಿಕೊಂಡು ಬೆಳಸಿಕೊಡುತ್ತ ಬಂದರು.

ಈ ಮೂವತ್ತು ವರ್ಷಗಳಲ್ಲಿ ಸಂಘವು ನಡಸಿದ ಕಾರ್ಯಕಲಾಪಗಳ ಸ್ವರೂಪ ವನ್ನು ನಮ್ಮ ಈಗಿನ ಸದಸ್ಯರು ಸ್ವಲ್ಪ ಕೇಳಬೇಕು. ಎಲ್ಲ ಸಂಘಗಳೂ ನಡ ಸುವ ಹೆಸರಾಂತ ವ್ಯಕ್ತಿಗಳ ಉಪನ್ಯಾಸಗಳೂ ಕಾವ್ಯವಾಚನಗಳೂ ಹಾಗಿರಲಿ; ಯಾರಿಗಾಗಿ ಸಂಘ ಸ್ಥಾಪನೆಯಾಯಿತೋ ಆ ವಿದ್ಯಾರ್ಥಿಗಳಿಂದಲೇ ಭಾಷಣ ಗಳು, ಕಾವ್ಯವಾಚನಗಳು, ಗಮಕಸ್ಪರ್ಧೆಗಳು, ಚರ್ಚಾಕೂಟಗಳು ನಡೆಯು ತ್ತಿದ್ದುದು ಈ ಸಂಘದ ಒಂದು ವೈಶಿಷ್ಟ್ಯ. ಇಡಿಯ ಕರ್ಣಾಟಕದಲ್ಲಿ ಮೊತ್ತ ಮೊದಲನೆಯ 'ವಿದ್ಯಾರ್ಥಿ ಕವಿ ಸಮ್ಮೇಳನ' ನಡೆದದ್ದು ಈ ಸಂಘದ ಆಶ್ರಯ ದಲ್ಲಿ. ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ಕೊಡುತ್ತಿದ್ದರು. ಸಣ್ಣ ಕತೆಗಳಿಗೆ ಒಂದು ಚಿನ್ನದ ಪದಕ, ಚರ್ಚಾಸ್ಪರ್ಧೆಗೆ ಒಂದು ಚಿನ್ನದ ಪದಕ ಏರ್ಪಾಟಾಗಿತ್ತು. ಕೆಲವು ವರ್ಷಗಳು ಐವತ್ತು ರೂಪಾಯಿನ ಒಂದು ವಿದ್ಯಾರ್ಥಿವೇತನವನ್ನು ಕೊಡುತ್ತಿದ್ದರು. ಆರಂಭದ ಅನೇಕ ವರ್ಷಗಳು ವಿಜೃಂಭಣೆಯಿಂದ ವಾರ್ಷಿಕೋತ್ಸವ ನಡೆದು, ಆ ಸಂದರ್ಭದಲ್ಲಿ ಯಾವುದಾ ದರೂ ಒಂದು ಗಟ್ಟಿ ನಾಟಕವನ್ನು ಆಡುತ್ತಿದ್ದರು. ಕನ್ನಡದಲ್ಲಿ ಗಣ್ಯವಾದ ಕೆಲಸ ಮಾಡಿದ ಹಿರಿಯರನ್ನು ಆಹ್ವಾನಿಸಿ, ಅವರಿಗೆ ಮಾನಪತ್ರವನ್ನು ಸಮ ರ್ಪಿಸಿ, ಅವರ ಭಾವಚಿತ್ರವನ್ನು ಅನಾವರಣ ಮಾಡುತ್ತಿದ್ದರು. ಆಗಿನ ಕಾಲ ದಲ್ಲಿ ಸಂಘದ ಕೆಲಸ ಬಹುಮುಖವಾಗಿತ್ತು, ಕಾಲೇಜಿನ ಹೊರಗೆ ಕೂಡ ಅದರ ಪ್ರಭಾವ ಹರಡಿಕೊಂಡಿತ್ತು.

ವರ್ಷವರ್ಷವೂ ಸಂಘ ನಡಸುತ್ತಿದ್ದ ಮೇಲೆ ಹೇಳಿದ ಕಾರ್ಯಕಲಾಪಗಳ ಜೊತೆಗೆ, ಅದಕ್ಕಿಂತ ಹೆಚ್ಚು ಕಾಲದ ವರೆಗೆ, ಕಣ್ಣಿಗೆ ಕಟ್ಟುವಂತೆ, ಈಗಲೂ ಕೈಗೆ ಎಟ್ಟುವಂತೆ ಆದ ಕೆಲಸವೆಂದರೆ—ಹದಿಮೂರು ವರ್ಷಗಳ ಕಾಲ ಸಂಘವು ತಾನು ನಡಸಿದ **'ಪ್ರಬುದ್ಧ ಕರ್ಣಾಟಕ'**ವೆಂಬ ತ್ರೈಮಾಸಿಕ ಪತ್ರಿಕೆಯ ಹದಿಮೂರು ಸಂಪುಟಗಳು; ಮತ್ತು ಅದರ ಆಶ್ರಯದಿಂದ ಪ್ರಕಟಪಡಿಸಿದ, ಇಪ್ಪತ್ತಕ್ಕೂ ಮೇಲ್ಪಟ್ಟ, ಪುಸ್ತಕಗಳು. ತನ್ನ ಇತರ ಕಾರ್ಯವಿತರಣೆಗಳಿಂದ ಸಂಘ ಅನಂತರದ ಸಂಘಗಳಿಗೆ ಹೇಗೆ ಮಾದರಿಯಾಯಿತೋ ಹಾಗೆಯೇ ಈ ಸಂಘದ ಪ್ರಕಟನೆಗಳಾದರೂ ಕನ್ನಡ ಪುಸ್ತಕಪ್ರಕಾಶನಕ್ಕೆ ತಾವೂ ಮೇಲ್ಪಂಕ್ತಿಯಾದವು. (ಹೆಚ್ಚಿನ ವಿವರಗಳಿಗೆ ನಮ್ಮ 'ಮೊನ್ನೆ ವನ್ನ' ಮತ್ತು 'ಮಕ್ಕಳ ಮಾತು'ಗಳ ಮೊದಲ ಪುಟಗಳನ್ನು ನೋಡಿ.)

ಹೀಗೆ ಬೊಗಸೆ ಬೊಗಸೆಯಾಗಿ ಕೆಲಸ ಮಾಡಿ ಕಟ್ಟಿಬಂದ ಸಂಘವು ಈಗ ಚಿಟಿಕೆಚಿಟಿಕೆಯಾಗಿ ಕೆಲಸ ಮಾಡುತ್ತಿದ್ದರೆ, ಅದಕ್ಕೆ ಈಗಿನ ಸಮಯ ಸನ್ನಿವೇಶಗಳು ಎಷ್ಟುಮಟ್ಟಿಗೆ ಕಾರಣಗಳೋ ಅಷ್ಟೇ ಮಟ್ಟಿಗೆ ಸಂಘವನ್ನು ನಡಸಲು ನಿಂತಿರುವ ನಮ್ಮ ಪರಿಮಿತಶಕ್ತಿಗಳೂ ಕಾರಣ. ಆದರೂ ನಾವು ನಿರ್ವಂಚನೆಯಿಂದ ನಮ್ಮ ಶಕ್ತಿಯಿದ್ದಷ್ಟೂ ಸಂಘಕ್ಕಾಗಿ ಕಾರ್ಯಪರರಾಗಿದ್ದೇವೆ ಎಂದಷ್ಟೇ ನಮಗೆ ತೃಪ್ತಿ.

## ಈಚಿನ ಆರು ವರ್ಷ

ಹಿಂದೆ, ಒಂದೆರಡು ಸಲ ನಾನು ಇದೇ ಕಾಲೇಜಿನಲ್ಲಿ ಅಧ್ಯಾಪಕನಾಗಿ ಬಂದಿದ್ದಾಗ, ನನಗಿಂತ ಹಿರಿಯರು ಸಂಘವನ್ನು ಹೊತ್ತಿದ್ದರಾದ್ದರಿಂದ ನಾನು ನಿರ್ಲಿಪ್ತನಾಗಿದ್ದೆ, ಅವರು ಹೇಳಿದಷ್ಟು ಮಾಡಿದ್ದೆ. ಆಗ 1942ರಲ್ಲಿ ಶ್ರೀ ಅವರ '**ಅಶ್ವತ್ಥಾಮನ್**' ನಾಟಕದ ಎರಡನೆಯ ಆವೃತ್ತಿಯನ್ನು ಪ್ರಕಟಗೊಳಿಸಿದ್ದು ಒಂದೇ ನನಗೆ ತೃಪ್ತಿಕೊಟ್ಟ ಕೆಲಸ. 1938ರಲ್ಲಿ ನಿಂತುಹೋದ ನಮ್ಮ ಸಂಘದ ಪ್ರಕಟನೆಗಳನ್ನು ಮತ್ತೆ ನಡಸಬೇಕೆಂದು ನಾನು ಕನಸು ಕಂಡದ್ದು ಆಗ. ಆ ಕನಸು ನನಸಾಗುವಂತೆ ಸಂಘ ನನ್ನ ಕೈಗೆ ಬಂದದ್ದು 14–9–1948ರಲ್ಲಿ.

ಸಂಘ ನನ್ನ ಕೈಗೆ ಬಂತು ಎಂದರೆ, ಸಂಘದ್ದಾಗಿ ಬ್ಯಾಂಕಿನಲ್ಲಿದ್ದ ನಗದು ಹಣ, ಸಂಘದಲ್ಲಿ ಮಾರಾಟಕ್ಕಿದ್ದ ಪುಸ್ತಕಗಳು ಮತ್ತು ಸಂಘಕ್ಕೆ ಬರಬೇಕಾಗಿದ್ದ ಸುಮಾರು ನೂರಾರು ರೂಪಾಯಿಗಳ ಬಾಕಿಯ ಪಟ್ಟಿ. "ಮೊದಲು ಬಾಕಿಗಳನ್ನು ವಸೂಲು ಮಾಡತಕ್ಕದ್ದು; ಜೊತೆಗೆ, ಇರುವ ಪುಸ್ತಕಗಳನ್ನು ಮಾರಿ ಹಣ ಸಂಪಾದಿಸತಕ್ಕದ್ದು; ಅದುವರೆಗೂ, ಬ್ಯಾಂಕಿನಲ್ಲಿರುವ ಹಣವನ್ನು ಮುಟ್ಟತಕ್ಕದ್ದಲ್ಲ. ಇದು ಈ ವರ್ಷ ಕರ್ಣಾಟಕ ಸಂಘದ ಕಾರ್ಯಕ್ರಮ" ಎಂದು ಆ ವರ್ಷಕ್ಕೆ ವಿಧಿಸಿಕೊಂಡದ್ದಾಯಿತು. ಅದರಂತೆ ಆ ವರ್ಷ (14–9–48ರಿಂದ 23–6–49) ಬಾಕಿಗಳನ್ನು ವಸೂಲು ಮಾಡುವುದರಲ್ಲೂ ಇದ್ದ ಪುಸ್ತಕ ಮಾರುವುದರಲ್ಲೂ ಕಳೆಯಿತು. ಸಂಘದ ಕೋಣೆಯಲ್ಲಿ ಕಸ ಗುಡಿಸುವುದಕ್ಕೆ ತಿಂಗಳಿಗೊಂದರಂತೆ ಕೊಟ್ಟ ಆರು ರೂಪಾಯಿ ಹೊರತು, ಸಂಘಕ್ಕೆ ಮತ್ತೇನೂ ವ್ಯಯವಾಗಲಿಲ್ಲ. ಇಲ್ಲಿಗೆ ಮೊದಲನೆಯ ವರ್ಷ ಮುಗಿಯಿತು.

* * * * *

ಸಂಘಕ್ಕೆ ಬರಬೇಕಾದ್ದೆಲ್ಲ ಕಡೆಯ ಬಿಡಿಕಾಸಿನ ವರೆಗೂ ವಸೂಲಾಗಬೇಕಾದರೆ, ಹಿಂದಿನ ಪ್ರಕಟನೆಗಳಲ್ಲಿ ಉಳಿದಿದ್ದ ಪುಸ್ತಕಗಳು ನಿಶ್ಶೇಷವಾಗಿ ಮಾರಾಟವಾಗಬೇಕಾದರೆ, ಮುಂದಿನ ವರ್ಷಕ್ಕೆ ಬಂದೆವು. ಆ ವರ್ಷ (ಎಂದರೆ 14–10–49ರಿಂದ 12–2–50) ಬಾಕಿ ವಸೂಲಿ, ಪುಸ್ತಕ ವ್ಯಾಪಾರಗಳ ಜೊತೆಗೆ ಹಿರಿಯರಿಂದಲೂ ವಿದ್ಯಾರ್ಥಿಗಳಿಂದಲೂ ಉಪನ್ಯಾಸಗಳನ್ನೂ ಕಾವ್ಯವಾಚನಗಳನ್ನೂ ಏರ್ಪಡಿಸಿದ್ದಲ್ಲದೆ, ಕೆಲವು ಪ್ರಬಂಧ ಸ್ಪರ್ಧೆಗಳನ್ನು ನಡಸಿ, ಅವಕ್ಕೆ ಬಹುಮಾನಗಳನ್ನು ಕೊಡಲಾಯಿತು. ಆ ವರ್ಷ ನಮ್ಮ ವಿದ್ಯಾರ್ಥಿಗಳು ಕವಿ ರನ್ನನ ಸಹಸ್ರವಾರ್ಷಿಕ ವರ್ಧಂತಿಯನ್ನು ನಡಸಿದ್ದೂ, ಆ ಸಂಬಂಧವಾಗಿ ಲೇಖನ ಸ್ಪರ್ಧೆಗಳು ಏರ್ಪಟ್ಟದ್ದೂ ಸಂಘದ ರಥ ಮುಂದೆ ಚಲಿಸುವುದಕ್ಕೆ ಮಂಗಲವಾದ ನಾಂದಿಯಾಯಿತು.

ಹಿಂದೆ, 1932ರಲ್ಲಿ, ಸಂಘ 'ಪ್ರಬುದ್ಧ ಕರ್ಣಾಟಕ'ವನ್ನು ನಡಸುತ್ತಿದ್ದಾಗ, ಅದರೊಳಗಿಂದ ಪ್ರತ್ಯೇಕವಾಗಿ ತೆಗೆದಿರಿಸಿದ್ದ **"ಬೆಂಗಳೂರಿನ ತಮಾಷೆ ಬಂಗಲೆ"** ಮತ್ತು **"ಶ್ರೀ ಕೈಲಾಸವೂ ಮಾನಸ ಸರೋವರವೂ"** ಎಂಬ ಎರಡು ಸಚಿತ್ರ ಲೇಖನಗಳು ಹಾಗೆಯೇ ಇದ್ದುವು. ಈ ವರ್ಷ ಅವುಗಳನ್ನು ಸಂಘ ಎರಡು ಕಿರುಹೊತ್ತಗೆಗಳಾಗಿ ಪ್ರಕಟಿಸಿತು.

* * * * *

**ಮೂರನೆಯ ವರ್ಷ** (1–11–50ರಿಂದ 12–2–51): ಇದುವರೆಗೆ ಸಂಘದ್ದಾಗಿ ಬ್ಯಾಂಕಿನಲ್ಲಿದ್ದ ಹಣವನ್ನು ಮುಟ್ಟಲು ಹಿಂಜರಿದಿದ್ದೆ. ಕಾರಣವೇನೆಂದರೆ—ಏನಾದರೂ ಕೇಳಿ ಮಾಡಬೇಕಾದರೆ, ನನಗೆ ಹತ್ತಿರ ಯಾರೂ ಸಂಘದ ಹಿರಿಯರು ಇರಲಿಲ್ಲ. ಆದರೆ ಈ ವರ್ಷ ಶ್ರೀ ವಿ. ಸೀತಾರಾಮಯ್ಯನವರು ಇಲ್ಲಿ ನನಗೆ ಹಿರಿಯರಾಗಿ ಬಂದರು. ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ನನ್ನನ್ನು ಕೋಶಾಧಿಕಾರಿಯನ್ನಾಗಿ ನೇಮಿಸಿ, ಸಂಘದ ದ್ರವ್ಯಗಳನ್ನು ಹೊಸ ಪುಸ್ತಕಗಳ ಪ್ರಕಟನೆಗೆ ಬಳಸಿಕೊಳ್ಳಬಹುದೆಂದು ಅನುಮತಿ ಕೊಟ್ಟಿತು. ಅದರ ಮೇರೆಗೆ, ಸಂಘದ ಹಣಕಾಸುಗಳ ಲಾಲನೆ ಪಾಲನೆ ನನ್ನ ಕೈಗೆ ಬಂತು, ಪ್ರಕಟನೆಗಳನ್ನು ನಿರ್ವಹಿಸುವ ಸ್ವಾತಂತ್ರ್ಯ ನನಗೆ ಲಭಿಸಿತು.

(ಇಲ್ಲಿ ಒಂದು ಮಾತು ಹೇಳಬೇಕು: ನಾನು ಸಂಘಕ್ಕೆ ಬಂದಾಗ, 13–9–48ರಲ್ಲಿ ಬ್ಯಾಂಕಿನಲ್ಲಿದ್ದ ಹಣ ರೂ. 2043—9—3. ಬಾಕಿ ವಸೂಲಿ

ಗಳಾಗಿ, ಪುಸ್ತಕ ಮಾರಾಟ ಮಾಡಿ, ಸಂಘದ ವಾರ್ಷಿಕ ವೆಚ್ಚಗಳು ಕಳೆದ ಮೇಲೆ, ನಾನು ಕೋಶಾಧಿಕಾರಿಯಾಗಿ ನೇಮಕವಾದ ಮೇಲೆ, ಈ ವರ್ಷದ ಕೊನೆಗೆ 24-3-51ರಲ್ಲಿ ಬ್ಯಾಂಕಿನಲ್ಲಿದ್ದದ್ದು ರೂ. 2435—15—3. ಮತ್ತೆ, ಪ್ರಕಟನೆಗಳಿಗೋಸ್ಕರವಾಗಿ 14-8-51ರಂದು ಕಾಗದ ಕೊಂಡುಕೊಂಡಾಗ ಬ್ಯಾಂಕಿನಲ್ಲಿ ಇದ್ದದ್ದು ರೂ. 2606—13—9.)

ಈ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ಹೆಚ್ಚು ವಿದ್ಯಾರ್ಥಿ ಕಾರ್ಯಕ್ರಮಗಳು ನಡೆದುವು. ಭಾಷಣಗಳಿಗಿಂತ ವಿಧವಿಧವಾದ ಲೇಖನ ವ್ಯವಸಾಯಗಳು ನಡೆದವು. ಉತ್ತಮವಾದ ಲೇಖನಗಳಿಗೆ ಪುಸ್ತಕರೂಪದಲ್ಲಿ ಬಹುಮಾನಗಳೂ ದೊರೆತವು.

* * * * *

**ನಾಲ್ಕನೆಯ ವರ್ಷ:** (7-10-51ರಿಂದ 12-2-52) ಈ ವರ್ಷದ ಉಪನ್ಯಾಸ ಲೇಖನ ಕಾರ್ಯಗಳು ಹಿಂದಿನ ವರ್ಷಗಳಂತೆಯೇ ನಡೆದವು. ಮುಂದಿನ ವರ್ಷ ಈ ಕಾರ್ಯಗಳನ್ನು ಪೂರ್ಣವಾಗಿ ನಿಲ್ಲಿಸಿ, ಒಂದು ವರ್ಷ ಪೂರ್ತಿಯಾಗಿ ಪ್ರಕಟನೆಗೇ ನಿಲ್ಲುವ ಸಿದ್ಧತೆಗಳಾಗುತ್ತಿದ್ದವು.

* * * * *

**ಐದನೆಯ ವರ್ಷ.** (ಫೆಬ್ರುವರಿ 52ರಿಂದ ಜನವರಿ 53): ನಮ್ಮ ಸಂಘದಲ್ಲಿ ವಿದ್ಯಾರ್ಥಿಗಳು ಕೇವಲ ನಾಲ್ಕೈದು ತಿಂಗಳು ಮಾತ್ರ ಕೆಲಸ ಮಾಡಿದರೂ ಸಂಘವು ವರ್ಷದ ಉದ್ದಕ್ಕೂ ಕೆಲಸ ಮಾಡುತ್ತಿರುತ್ತದೆ. ಈ ವರ್ಷ ಹಾಗೆ ಕೆಲಸಮಾಡಿದ್ದರ ಪರಿಣಾಮವಾಗಿ, ಒಂದರ ಹಿಂದೆ ಒಂದರಂತೆ ಏಳು ಪುಸ್ತಕಗಳು ಪ್ರಕಟವಾದವು: ೧. ಫೆಬ್ರವರಿ 52: **ಶ್ರೀ ಕೈಲಾಸಂ ಅವರ ಸ್ಮರಣೆ.** ಶ್ರೀಮಾನ್ ಕೆ. ವಿ. ಅಯ್ಯರ್ ಅವರು ಬರೆದದ್ದು. ಕೈಲಾಸಂ ಅವರನ್ನು ಕುರಿತ ಒಂದು ಅಪೂರ್ವವಾದ ಆಪ್ತಚಿತ್ರ. ೨. ಜೂನ್ 52 : **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ.** ಕಾಳಿದಾಸನ ಸಂಸ್ಕೃತ ಶೃಂಗಾರ ನಾಟಕವನ್ನು ಶ್ರೀಮಾನ್ ಮೋ. ಶಂ. ಸುಬ್ರಹ್ಮಣ್ಯಶಾಸ್ತ್ರೀ ಅವರು ಕನ್ನಡಿಸಿದ್ದು. ೩. ಆಗಸ್ಟ್ 52: **ಮೊನ್ನ ವನ್ನ.** ಬೆಲ್ಜಿಯಂ ದೇಶದ ಮಹಾಸಾಹಿತಿ ಮಾರಿಸ್ ಮ್ಯಾಟರ್‌ಲಿಂಕನ ನಾಟಕವನ್ನು ಶ್ರೀಮಾನ್ ಎಸ್. ಜಿ. ಶಾಸ್ತ್ರಿ ಅವರು ಅನುವಾದ ಮಾಡಿದ್ದು. ೪. ಸೆಪ್ಟೆಂಬರ್ 52: **ನಾಗನ**

**ಪದಗಳು**. 'ರತ್ನನ ಪದಗಳು' ಬರೆದ ಶ್ರೀಮಾನ್ ಜಿ. ಪಿ. ರಾಜರತ್ನಂ ಅವರ ಹೊಸ ಹಾಡುಗಳು. **೫, ೬, ೭.** ಜನವರಿ 53: **ಬಾಲಸರಸ್ವತಿ, ಚಿನ್ನದ ದೋಸೆ** ಮತ್ತು **ನಮ್ಮನಮ್ಮವರು**. ಇವು ಮೂರೂ ನಮ್ಮ ವಿದ್ಯಾರ್ಥಿಗಳು ತಾವೇ ಬರೆದ ಉತ್ತಮವಾದ ಕೃತಿರಚನೆಗಳು.

"ಬಾಲ ಸರಸ್ವತಿ"ಯನ್ನು ಕುರಿತು ಪ್ರತ್ಯೇಕವಾಗಿ ಎರಡು ಮಾತು ಹೇಳಬೇಕು: ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘ ಜನ್ಮತಾಳಿದ್ದು—ಕಾಲೇಜಿನ ವಿದ್ಯಾರ್ಥಿಗಳಿಗೋಸ್ಕರ, ಅವರ ಸಹಯೋಗದಿಂದ. ಸಂಘದಲ್ಲಿ 'ಪ್ರಬುದ್ಧ ಕರ್ಣಾಟಕ' ತಲೆದೋರಿದ್ದಾದರೂ ವಿದ್ಯಾರ್ಥಿಗಳ ಬರವಣಿಗೆಗಳಿಗೆ ರಂಗವಾಗಲೆಂದೇ. ಆದ್ದರಿಂದ, ಸಂಘ ಈಗ ಮತ್ತೊಮ್ಮೆ ಪುಸ್ತಕ ಪ್ರಕಾಶನಕ್ಕೆ ತೊಡಗಿರುವಾಗ, ವಿದ್ಯಾರ್ಥಿಗಳ ಉತ್ತಮ ಬರಹಗಳನ್ನು ಒಳಕೊಂಡ ಒಂದು ಪುಸ್ತಕವನ್ನೂ ಪಡೆಯಲು ಪ್ರಯತ್ನಿಸುವುದು ಯೋಗ್ಯವಾಗಿ ತೋರಿತು. ಅದರಂತೆ—ವಿದ್ಯಾರ್ಥಿಗಳಿಗೆ ಒಂದು ಎಂಟು ವಾರಗಳ ಕಾರ್ಯಕ್ರಮವನ್ನು ಸೂಚಿಸಲಾಯಿತು. ಅನೇಕರು ಅದಕ್ಕೆ ವಿಧೇಯರಾಗಿ ನಡೆದು ಬರೆದು ಕೊಟ್ಟರು. ಅವುಗಳಲ್ಲಿ ಉತ್ತಮವಾದವನ್ನು ಪ್ರಕಟಿಸಲು ನಮಗೂ ಅಭಿಮಾನವಾಯಿತು. ಈ ಪುಸ್ತಕವನ್ನು ವಿಜೃಂಭಣೆಯಿಂದ ಪ್ರಕಟಿಸುವ ಒಂದು ಸುಯೋಗವೂ ಚೆನ್ನಾಗಿ ಒದಗಿ ಬಂತು.

ಅದು ಏನೆಂದರೆ—ನಮ್ಮ ಸಂಘ ಪ್ರಕಟಿಸುತ್ತಿದ್ದ 'ಪ್ರಬುದ್ಧಕರ್ಣಾಟಕ'ದ ಹೊದಿಕೆಯ ಚಿತ್ರವನ್ನು ನೋಡಿದ್ದವರಿಗೆ ಅಲ್ಲಿನ ಸೂರ್ಯ—ಕಮಲಗಳ ನೆನಪಾಗುತ್ತದೆ. ನಿಜವಾಗಿಯೂ ಕೆಸರಿನ ನಡುವೆ ಹುಟ್ಟಿ, ಬೆಳೆದು, ಅರಳಿದ ಕಮಲವೆಂದರೆ ನಮ್ಮ ಕರ್ಣಾಟಕ ಸಂಘ. ಕಣ್ಣಿಗೂ ಕಿವಿಗೂ ಮೂಗಿಗೂ ನಿಮಿಷನಿಮಿಷದಲ್ಲೂ ವಿಧವಿಧವಾದ ಅಸಹ್ಯ ಅನುಭವಗಳನ್ನು ಒದಗಿಸುತ್ತಿದ್ದ ಅಂಥ ಸ್ಥಳದಲ್ಲಿಯೂ* ಸುಮಾರು ಮೂವತ್ತೈದು ವರುಷ

* ಅದೂ ಎಂಥ ಸ್ಥಳ! ಸಂಘದ ಸುತ್ತ—ಒಂದು ಕಡೆ ಹೋಟಲು; ಇನ್ನೊಂದು ಕಡೆ ಗೋಲಿ ಆಡುತ್ತ, ಹುಣಿಸೆಮರಕ್ಕೆ ಕಲ್ಲು ಬೀರುತ್ತ ಜಗಳ ಕಾಯುವ ಬೀದಿ ಹುಡುಗರು; ಕಿಟಕಿಯ ಎದುರಿಗೆ ಸಾರ್ವಜನಿಕರ ಜಲಶಂಕೆಗಳಿಗೆ ಆಶ್ರಯವಾದ ಮೈದಾನ ; ಬಾಗಿಲಿಗೆ ಹತ್ತಿರದಲ್ಲೆ ಕಕ್ಕಸು; ಅದಕ್ಕೆ ಅನತಿದೂರದಲ್ಲಿ ಹಳೆಯ ಕಾಗದಗಳನ್ನು ಸುಟ್ಟು ಹೊಗೆಯೆಬ್ಬಿಸುವ ಗುಂಡಿ. ಸಂಘದ ಒಳಗೋ—ಕೆಲವು ಋತುವಿ

ಸಂಘ ತನ್ನ ಕೆಲಸವನ್ನು ಮಾಡಿದ್ದು ಆಶ್ಚರ್ಯ. ಈ ಆಶ್ಚರ್ಯವನ್ನು ಸಾಧಿಸಿದ್ದು ಮುಖ್ಯವಾಗಿ ನಾಲ್ವರು ಮಹನೀಯರ ಶುದ್ಧಸತ್ತ್ವ: ಕಾರ್ಯನಿರತರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಮತ್ತು ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು; ಸಂಘದ ಅಧ್ಯಕ್ಷರುಗಳಾದ ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಮತ್ತು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು. ಈ ಹೊತ್ತಿಗೂ ಈ ನಾಲ್ವರು ಮಹನೀಯರೂ ನಮ್ಮ ಸಂಘಕ್ಕೆ ನಾಲ್ಕು ದಿಕ್ಕು. ಇವರಲ್ಲಿ, ಸ್ಥಾಪಕರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳದು ಹೊರತು ಉಳಿದ ಮೂವರ ಭಾವಚಿತ್ರಗಳು ನಮ್ಮ ಸಂಘದಲ್ಲಿ ನಮ್ಮ ಕಾರ್ಯಗಳಿಗೆ ನಿತ್ಯಸಾಕ್ಷಿಗಳಾಗಿದ್ದವು. ಸ್ಥಾಪಕರ ಭಾವಚಿತ್ರವನ್ನೂ ತಂದುಕೊಳ್ಳಬೇಕೆಂದು ಮನಸ್ಸಿತ್ತಾದರೂ, ಸಂಘದ ಸನ್ನಿವೇಶವನ್ನು ಇನ್ನೂ ಸ್ವಚ್ಛವಾದ ಕಡೆಗೆ ಬದಲಿಸಿದಲ್ಲದೆ ಅವರನ್ನು ಬರಮಾಡಿಕೊಳ್ಳಲು ಸಂಕೋಚವಾಗುತ್ತಿತ್ತು. ಈಗ, ಈ ವರ್ಷದಲ್ಲಿ, ಸಂಘಕ್ಕೆ ತಕ್ಕಮಟ್ಟಿಗೆ ಸುಟಿಯಾದ ಒಂದು ನಿರ್ಮಲ ಪ್ರದೇಶ ಲಭಿಸಿತು. ಅಲ್ಲಿಗೆ ಸ್ಥಾಪಕರ ಭಾವಚಿತ್ರವನ್ನು ತಂದುಕೊಳ್ಳುವುದೆಂದು ನಿರ್ಧರಿಸಿ, ಭಾವಚಿತ್ರದ ಅನಾವರಣಕ್ಕೆ ಸಿದ್ಧತೆಗಳಾದುವು.

ಅನಾವರಣದ ಸಂದರ್ಭದಲ್ಲಿ ನಮ್ಮ ಸಂಘದ ಸ್ಥಾಪಕರಿಗೆ ಏನು ಸಂಭಾವನೆ ಕೊಟ್ಟೇವು? ಏನು ಕೊಟ್ಟರೆ ಯುಕ್ತವಾದೀತು? ವಿದ್ಯಾರ್ಥಿಗಳಿಗಾಗಿ ಸಂಘ ಸ್ಥಾಪಿಸಿದವರಿಗೆ ವಿದ್ಯಾರ್ಥಿಗಳದೇ ಆದ "ಬಾಲಸರಸ್ವತಿ"ಯನ್ನು ಸಮರ್ಪಿಸಿದರೆ ಹೇಗೆ? ಶ್ರೀಮಾನ್ ಕೃಷ್ಣಶಾಸ್ತ್ರಿಗಳು ವಿದ್ಯಾರ್ಥಿಗಳ ಲೇಖನಯೋಗಕ್ಕೆ ಸಂತೋಷಪಟ್ಟು, ಅವರ 'ಬಾಲಸರಸ್ವತಿ'ಯನ್ನು ಸ್ವೀಕಾರ ಮಾಡಿ ಆಶೀರ್ವದಿಸಿದ್ದಲ್ಲದೆ, ಅವರಲ್ಲಿ ಕೆಲವರಿಗೆ ವಿಶೇಷವಾದ ಪಾರಿತೋಷಿಕಗಳನ್ನು ಕೊಟ್ಟರು. ಈ ಉತ್ಸವಕ್ಕೆ ತಾವೇ ಬಂದು ಎದುರಿಗೆ ಇರಲು ಶ್ರೀಮಾನ್ ಶಾಸ್ತ್ರಿಗಳು ಒಪ್ಪದೆಹೋದರೂ ಅವರ ಆಪ್ತರು ಇಷ್ಟರು ಬಂಧುಗಳು ವಿದ್ಯಾರ್ಥಿಗಳು

---

ನಲ್ಲಿ ಮಳೆಯ ನೀರು, ಇನ್ನು ಕೆಲವು ಕಾಲ ಗೆದ್ದಲುಹುಳು, ಮತ್ತೆ ಕೆಲವು ಕಾಲ ಕಂಬಳಿ ಹುಳು, ಉಳಿದ ವೇಳೆಯಲ್ಲಿ ಬೀದಿಯ ಒಣಧೂಳು. ಗೋಡೆಯ ಮೇಲೆ ಇದ್ದ 'ಗ್ರೂಪ್ ಫೋಟೊ'ಗಳು ಹುಳುಗಳಿಗೆ ಆಹಾರವಾಗುತ್ತಿದ್ದದ್ದರಿಂದ, ಅವುಗಳ ಗಾಜುಗಳನ್ನೆಲ್ಲ ಮಾರಿಬಿಟ್ಟು, ಒಳಗಿನ ಫೋಟೋಗಳನ್ನು ಒಂದು album ಮಾಡಿ ರಕ್ಷಿಸಲಾಯಿತು.

ಎಲ್ಲರೂ ದಯಮಾಡಿಸಿದ್ದರು. ಆ ದಿನ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಅಧ್ಯಕ್ಷರು, ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿಗಳು ಭಾವಚಿತ್ರದ ಅನಾವರಣ ಮಾಡುವವರು. ಗಣಿತಭವನ ಆ ದಿವಸ ಸಭೆಗೆ ಸಾಲದೆ ಬಂದುದನ್ನು ನೋಡಿ, ನಮ್ಮ ಕಾಲೇಜಿನ ಹಳೆಯ 'ಅಟೆಂಡರ್' ಆತ ಹೇಳಿದ: "ಹಿಂದೆ ಕೃಷ್ಣ ಶಾಸ್ತ್ರಿಗಳ ಕಾಲದಲ್ಲಿ ಕರ್ಣಾಟಕಸಂಘದ ಸಭೆ ಹೀಗೆ ಸೇರುತ್ತಿತ್ತು." ನಾವು ಎಂದುಕೊಂಡೆವು: "ಈಗ ಹಾಗೇ ಸೇರಿದ್ದಾದರೂ ಅವರಿಗೋಸ್ಕರವಾಗಿಯೇ!"

"ಬಾಲಸರಸ್ವತಿ"ಯ ಪ್ರಕಟನೆಯನ್ನು ಕುರಿತು ಇನ್ನೂ ಒಂದು ವಿಶೇಷ ಸಂಗತಿ ಉಂಟು: 49-50ರಲ್ಲಿ ನಮ್ಮ ಸಂಘಕ್ಕೆ 139 ಸದಸ್ಯರು, ತಲಾ ನಾಲ್ಕಾಣೆಯಂತೆ; 50-51ರಲ್ಲಿ 263 ಸದಸ್ಯರು, ತಲಾ ನಾಲ್ಕಾಣೆಯಂತೆ; 51-52ರಲ್ಲಿ 149 ಸದಸ್ಯರು, ತಲಾ ನಾಲ್ಕಾಣೆಯಂತೆ. ಆದರೆ ಈ ವರ್ಷ 52-53ರಲ್ಲಿ, ಆಗಬೇಕಾಗಿದ್ದ ಕಾರ್ಯವನ್ನು ವಿದ್ಯಾರ್ಥಿಗಳಿಗೆ ವಿವರಿಸಿ, ಅವರ ಮನಸ್ಸನ್ನು ಒಲಿಸಿಕೊಂಡದ್ದರಿಂದ, 698 ಸದಸ್ಯರು ತಲಾ ಎಂಟಾಣೆಯಂತೆ ಚಂದಾ ಕೊಟ್ಟರು ಮಾತ್ರವಲ್ಲದೆ, 104 ಸದಸ್ಯರು ತಲಾ ಒಂದು ರೂಪಾಯಿ ಕೊಟ್ಟು 'ಬಾಲಸರಸ್ವತಿ'ಯನ್ನು ಕೊಂಡುಕೊಂಡರು. ಎಂದರೆ ಈ ಪುಸ್ತಕ ಪ್ರಕಟನ, ಭಾವಚಿತ್ರ ಅನಾವರಣಗಳಿಗಾಗಿ ವಿದ್ಯಾರ್ಥಿಗಳಿಂದ 453 ರೂಪಾಯಿಗಳು ಸಂದಾಯವಾದುವು! ಸಂಘ ವಿದ್ಯಾರ್ಥಿಗಳದು ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ?

ಆದರೆ ಈ ಹೊತ್ತಿನ ದಿವಸ ನಮ್ಮ ಸಂಘವು ಹಣಕಾಸಿಗಾಗಿ ವಿದ್ಯಾರ್ಥಿಗಳನ್ನು ಅವಲಂಬಿಸಬೇಕಾದ ಅಗತ್ಯವಿಲ್ಲ. ತನ್ನ ಪ್ರಕಟನೆಗಳಿಂದ ತಾನು ತನ್ನ ವೆಚ್ಚಗಳಿಗೆ ಬೇಕಾದಷ್ಟನ್ನು ದುಡಿದು ಸಂಪಾದಿಸಿಕೊಳ್ಳುತ್ತಿದೆ. ಆದರೆ, ಇಲ್ಲಿ ನಡೆಯುವ ಕೆಲಸಗಳು ಮುಖ್ಯವಾಗಿ ವಿದ್ಯಾರ್ಥಿಗಳಿಗೋಸ್ಕರವೇ ಆದ್ದರಿಂದ, ವಿದ್ಯಾರ್ಥಿಗಳೂ ಇದರೊಡನೆ ಒಂದೆರಡು ಕಾಸಿನ ಸಂಬಂಧವನ್ನು ಬೆಸೆದುಕೊಳ್ಳುವುದು ಅವರ ಸದ್ವಿನಿಯೋಗ ಬುದ್ಧಿಗೆ ಸಂಗತವಾದದ್ದು. ಅವರು ಕೊಡುವ ಪ್ರತಿ ಎಂಟಾಣೆಯ ಜೊತೆಗೆ ಸಂಘ ತಾನು ಒಂದು ರೂಪಾಯಿ ಹಾಕಿ, ಈ ವರ್ಷದ ಕೆಲಸವನ್ನು ಸಮರ್ಪಕವಾಗಿ ಮಾಡಿತು.

'ಬಾಲಸರಸ್ವತಿ'ಯನ್ನು ಪ್ರಕಟಿಸಿದಾಗಲೇ, ಅದರೊಳಗೆ ಇದ್ದಂಥ ಎಂಟು

ಜಾನಪದ ಕಥೆಗಳಷ್ಟನ್ನೆ ಪ್ರತ್ಯೇಕಿಸಿ, ಆ ಸಂಗ್ರಹವನ್ನು **"ಚಿನ್ನದ ದೋಸೆ ಮತ್ತು ಇತರ ಕಥೆಗಳು"** ಎಂಬ ಹೆಸರಿನಿಂದ ಪ್ರಕಟಿಸಿದ್ದಾಯಿತು.

ಸೆಂಟ್ರಲ್ ಕಾಲೇಜಿನಲ್ಲಿ ಈ ವರ್ಷ "ಬಾಲಸರಸ್ವತಿ" ಸಿದ್ಧವಾದಂತೆಯೇ ಹಿಂದೆ 1939ರಲ್ಲಿ ಮೈಸೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲೂ 1944ರಲ್ಲಿ ತುಮಕೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲೂ ವಿದ್ಯಾರ್ಥಿಗಳು ಹೀಗೇ ಲೇಖನ ಕಲೆಯಲ್ಲಿ ತಮ್ಮ ಕೈವಾಡವನ್ನು ತೋರಿಸಿ, ಆ ವಿಲಾಸಗಳೂ ಹೀಗೆಯೇ ಪುಸ್ತಕರೂಪದಲ್ಲಿ ಪ್ರಕಟಗೊಂಡಿದ್ದುವು. ಈಗ ಅವುಗಳನ್ನು ಒಟ್ಟಿಗೆ, "ಬಾಲಸರಸ್ವತಿ"ಗೆ ಜೊತೆಯಾಗಲೆಂದು, ಪುನಃ ಪ್ರಕಟಿಸಲಾಯಿತು. ಅದರ ಹೆಸರು **"ನಮ್ಮ ನಮ್ಮವರು."**

ವಿದ್ಯಾರ್ಥಿಗಳ ರಚನೆಗಳನ್ನು ಒಳಕೊಂಡ ಈ ಮೂರು ಪ್ರಕಟನೆಗಳಾದ ಮೇಲೆ, ಬೇಸಗೆಯ ರಜದಲ್ಲಿ, ವಿಜ್ಞಾನಕ್ಕೆ ಸಂಬಂಧಿಸಿದಂತೆ ಒಂದು ಉತ್ತಮ ಗ್ರಂಥವನ್ನು ಪ್ರಕಟಿಸಲು ಎತ್ತಿಕೊಂಡೆವು. ಸೆಂಟ್ರಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಅಧ್ಯಾಪಕರೂ ನಮ್ಮ ಸಂಘದ ಉಪಾಧ್ಯಕ್ಷರಲ್ಲಿ ಒಬ್ಬರೂ ಆದ ಶ್ರೀಮಾನ್ ಆರ್. ಎಲ್. ನರಸಿಂಹಯ್ಯ ಅವರು ಬರೆದ **"ಶಕ್ತಿ"** ಎಂಬ ಸಚಿತ್ರವೂ ಶಾಸ್ತ್ರೀಯವೂ ಆದ ಪುಸ್ತಕ ಆಗಸ್ಟ್ 53ರಲ್ಲಿ ಪ್ರಕಟವಾಯಿತು.

ಇದಿಷ್ಟೂ 1952—53ರ ಕೆಲಸ.

* * * * *

**ಆರನೆಯ ವರ್ಷ** (ಸೆಪ್ಟೆಂಬರ್ 53ರಿಂದ ಫೆಬ್ರವರಿ 54): 'ಬಾಲಸರಸ್ವತಿ' ಯನ್ನು ತಂದ ವರ್ಷ, ನಮ್ಮ ಸಂಘದಲ್ಲಿ ಚುನಾವಣೆಗಳನ್ನು ನಡಸಲೇ ಇಲ್ಲ. ನಮ್ಮ ಸದಸ್ಯರು ಕೂಡ, ಚುನಾವಣೆಗಳು ಈ ಸಲ ಬೇಡವೆಂದು ನಾವು ಹೇಳಿದ್ದಕ್ಕೆ ಸೌಜನ್ಯದಿಂದ ಒಪ್ಪಿಕೊಂಡರು. ನಿಯಮಿಸಿದ್ದ ಕೆಲಸಗಳನ್ನು ಬರೆದು ನಡಸಿದರು. ಉತ್ತಮವಾದದ್ದು ಅಚ್ಚಾಯಿತು. ಅದರಲ್ಲಿ ಅತ್ಯುತ್ತಮವೆಂದು ಗಣನೆಯಾದದ್ದನ್ನು ಬರೆದವರು ನಾಲ್ಕು ಜನ ಆ ವರ್ಷದ ಉತ್ಸವವನ್ನು ನಿರ್ವಹಿಸುವವರಾದರು. ಆಹ್ವಾನ ಪತ್ರಿಕೆಗಳು ಅವರ ಹೆಸರಿನಲ್ಲಿ ಅಚ್ಚಾದುವು. ಹೀಗೆ, ಸಂಘದಲ್ಲಿ ಕಾರ್ಯನಿರ್ವಾಹಕ ಸ್ಥಾನಕ್ಕೆ ಅಂತಃಸತ್ತ್ವದ ಅರ್ಹತೆಯನ್ನು ನೋಡಿ ಆರಿಸುವ ಒಂದು ಹೊಸ ಪ್ರಯೋಗ ರೂಢಿಗೆ ಬಂತು.

ನಾಲ್ಕಾಣೆಯೋ ಎಂಟಾಣೆಯೋ ಚಂದಾ ಕೊಟ್ಟು, ಕೈಯೆತ್ತಿಸಿ ಮೇಲೆ ಬರುವ ಹಳೆಯ ಪದ್ಧತಿ ಬಿದ್ದು ಹೋಯಿತು.

ಈ ವರ್ಷವಾದರೂ ಅದರದೇ ಇನ್ನೊಂದು ರೂಪಾಂತರ ನಡೆಯಿತು. ಚುನಾವಣೆಗಳಿಗೆ ಮೊದಲೆ ಒಂದು ಕಾವ್ಯವಾಚನ ಏರ್ಪಾಟಾಯಿತು. ಆ ವಾಚನವನ್ನು ಕೇಳಿ, ಅದನ್ನು ಕುರಿತು ವರದಿ ಬರೆದವರಲ್ಲಿ ಅತ್ಯುತ್ತಮವಾದ ವರದಿಯನ್ನು ಬರೆದವರು ಒಬ್ಬ ಕಾರ್ಯದರ್ಶಿಯಾದರು, ಅವರನಂತರದ ಇಬ್ಬರು ವರದಿಕಾರರು ಕಾರ್ಯಸಮಿತಿಯ ಸದಸ್ಯರಾದರು. ಈ ಆಯ್ಕೆಯಾದ ಎರಡು ದಿವಸಗಳ ಮೇಲೆ ಒಂದು ಆಶುಭಾಷಣ ಸ್ಪರ್ಧೆ ನಡೆಯಿತು. ಅದರಲ್ಲಿ ಅತ್ಯುತ್ತಮವಾಗಿ ಮಾತನಾಡಿದವರು ಮತ್ತೊಬ್ಬ ಕಾರ್ಯದರ್ಶಿಯಾದರು, ಅವರ ಅನಂತರದವರು ಇನ್ನಿಬ್ಬರು ಕಾರ್ಯಕಾರಿಸಮಿತಿಗೆ ಬಂದರು. ಹೀಗೆ ಇಬ್ಬರು ಕಾರ್ಯದರ್ಶಿಗಳೂ ನಾಲ್ವರು ಕಾರ್ಯಕಾರಿ ಸಮಿತಿಯ ಸದಸ್ಯರೂ ತಮ್ಮ ಬರಹದ, ನಾಲಗೆಯ ಬಲಗಳಿಂದಾಗಿ ಆಯ್ಕೆಯಾದರು! ತೋಳಬಲದಿಂದಲ್ಲ!

ಮಾಮೂಲಿನಂತೆ ಭಾಷಣಗಳೂ ವಾಚನಗಳೂ ತಕ್ಕಮಟ್ಟಿಗೆ ನಡೆದವು. ಕೈಯಲ್ಲಿದ್ದ ಹಣವೆಲ್ಲ ಬೇರೆ ಒಂದು ಯೋಜನೆಗಾಗಿ ಮೀಸಲಾಗಿದ್ದುದರಿಂದ ಈ ಭಾಗವನ್ನು ಮೊಟಕುಮಾಡಬೇಕಾಯಿತು.

ಆ ಯೋಜನೆ ಏನೆಂದರೆ—ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ 'ಎಸ್ಸೆ'ಗಳನ್ನು ಬರೆಯಿಸಿ, ಪ್ರಕಟಿಸುವುದು; ಮತ್ತು ಅವರಿಂದಲೆ ಐತಿಹಾಸಿಕ ಏಕಾಂಕ ನಾಟಕಗಳನ್ನು ಬರೆಯಿಸಿ ಪ್ರಕಟಿಸುವುದು. ವಿದ್ಯಾರ್ಥಿವೃಂದವು ಆಸಕ್ತಿ ವಹಿಸಿ ನಮ್ಮ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆಂದು ನಮಗೆ ತುಂಬ ತೃಪ್ತಿಯುಂಟು, **ಮಕ್ಕಳ ಮಾತು, ಪಚ್ಚೆಯ ತೆನೆ, ಗಂಧದ ಹುಡಿ,** ಮತ್ತು **ದುರಾಸೆಯ ದಂಡ** ಎಂಬ ನಾಲ್ಕು ಕಿರುಪುಸ್ತಕಗಳು ಈ ತೃಪ್ತಿಗೆ ಕಾರಣವಾಗಿವೆ.

**'ಮಕ್ಕಳಮಾತು'** ಎಂಬುದು 'ಕಾಲೇಜ್ ಬರವಣಿಗೆ' ಎಂಬ ಹೆಸರಿನಿಂದ ಡಿಸೆಂಬರ್ 53ರಲ್ಲಿ ಪ್ರಕಟವಾಯಿತು. ಸುಮಾರು 70 ಜನ ಇದಕ್ಕೆ 'ಎಸ್ಸೆ' ಗಳನ್ನು (ನಾವು ವಿಧಿಸಿದ ವಿಷಯದ ಮೇಲೆ, ತಮ್ಮ ಮನಸ್ಸಿಗೆ ಬಂದದ್ದಲ್ಲ) ಬರೆದು ಕಳಿಸಿದ್ದರು. ಅದರಲ್ಲಿ ಹತ್ತು ಮಾತ್ರ ಆಯ್ಕೆಯಾಗಿ ಅಚ್ಚಾಯಿತು. ಈ ಪ್ರಕಟನೆಗೆ 710 ಜನ ಸದಸ್ಯರು ತಲಾ ಎಂಟಾಣೆಯಂತೆ 355 ರೂಪಾಯಿ

ಗಳನ್ನು ಕೊಟ್ಟರು. ಸಂಘವು ಅವರಿಗೆ ಒಂದೊಂದು ಪುಸ್ತಕವನ್ನು ಕೊಟ್ಟಿತು.

ಡಿಸೆಂಬರ್ 53ರಲ್ಲಿ ಈ ಪುಸ್ತಕ ಕೊಡುವಾಗ, "ಜನವರಿ 54ರಲ್ಲಿ ಹೀಗೆಯೆ ಇನ್ನೊಂದು 'ಕಾಲೇಜ್ ಬರವಣಿಗೆ' ತರೋಣ. ನೀವು ಒಪ್ಪಿದರೆ ಇನ್ನೊಮ್ಮೆ ಈ ವಿಷಯಗಳ ಮೇಲೆ 'ಎಸ್ಸೆ' ಬರೆದು ಕೊಡಿ, ಮತ್ತೊಮ್ಮೆ ಎಂಟಾಣೆ ಚಂದಾ ಕೊಡಿ" ಎಂದು ಕೇಳಿದೆವು. ಒಂದುನೂರ ಎರಡು ಲೇಖನಗಳು ಬಂದುವು; 477 ಸದಸ್ಯರು ತಲಾ ಎಂಟಾಣೆಯಂತೆ 238½ ರೂಪಾಯಿಗಳನ್ನು ಕೊಟ್ಟರು. ಸಂಘವು ಅವರಿಗೆ ಒಂದೊಂದು ಪ್ರತಿ **'ಪಚ್ಚೆಯ ತೆನೆ'** ಯನ್ನು ಜನವರಿ 54ರಲ್ಲಿ ಕೊಟ್ಟಿತು.

ಮೇಲೆ ಹೇಳಿದ ಎರಡು ಪುಸ್ತಕಗಳಿಗಾಗಿ ವಿದ್ಯಾರ್ಥಿಗಳು ಬರೆದು ಕಳಿಸಿದ್ದ 'ಎಸ್ಸೆ'ಗಳಲ್ಲಿ, ಇದುವರೆಗೆ ಸುಮಾರು ಇಪ್ಪತ್ತನ್ನು ಮಾತ್ರ ಆರಿಸಿ ಪ್ರಕಟಿಸಿ ದೆವು. ಇನ್ನೂ ಕೆಲವು ಒಳ್ಳೆಯ ಬರಹಗಳು ಹಾಗೆಯೆ ನಿಂತುಹೋಗಿತ್ತು. ಬರೆಸಿದ ಮೇಲೆ, ಒಳ್ಳೆಯದು ಇದ್ದರೆ ಅದನ್ನು ಪ್ರಕಟಿಸುವುದು ಸಂಘದ ಕರ್ತವ್ಯವಾಗಿತ್ತು. ಸಂಘ ತನ್ನ ಕರ್ತವ್ಯವನ್ನು ನಡಸಿತು: **'ಗಂಧದ ಹುಡಿ'** ಎಂಬ ಹೆಸರಿನಲ್ಲಿ ಇತರ 'ಎಸ್ಸೆ'ಗಳು ಫೆಬ್ರವರಿ 54ರಲ್ಲಿ ಪ್ರಕಟವಾದುವು.

ಈ ಮಧ್ಯೆ ಸಂಘವು 'ಐತಿಹಾಸಿಕ ಏಕಾಂಕ ನಾಟಕ ಸ್ಪರ್ಧೆ'ಯೊಂದನ್ನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿ, ಸರ್ವೋತ್ತಮವಾದು ದಕ್ಕೆ ಒಂದು ಸ್ವರ್ಣಪದಕವನ್ನು ಕೊಡಬೇಕೆಂದು ಉದ್ದೇಶಿಸಿತ್ತು. ಆದರೆ, ಸ್ಪರ್ಧೆಗೆ ಬಂದ ಹದಿಮೂರು ನಾಟಕಗಳಲ್ಲಿ ಕೆಲವು ಗುಣವಂತವಾಗಿದ್ದರೂ, ಪದಕಕ್ಕೆ ಬೇಕಾದ ಪರಿಪೂರ್ಣತೆ ಯಾವುದರಲ್ಲೂ ಕಂಡುಬರಲಿಲ್ಲವೆಂದು ಪರೀ ಕ್ಷಕರು ಅಭಿಪ್ರಾಯಪಟ್ಟದ್ದರಿಂದ, ಪದಕಕ್ಕೆಂದು ಇಟ್ಟಿದ್ದ ಹಣವನ್ನು ಬಂದ ದ್ದರಲ್ಲಿ ಒಳ್ಳೆಯವಾದ ಐದು ನಾಟಕಗಳಿಗೆ ಯೋಗ್ಯತಾನುಸಾರವಾಗಿ ಹಂಚ ಲಾಯಿತು. ಹೀಗೆ ಬಹುಮಾನವಾಗಿ ಕೊಟ್ಟ ಒಟ್ಟು ಮೊತ್ತ—250 ರೂಪಾಯಿ ಗಳು. ಬಹುಮಾನ ಪಡೆದ ಐದು ನಾಟಕಗಳನ್ನು **"ದುರಾಸೆಯ ದಂಡ ಮತ್ತು ಇತರ ನಾಟಕಗಳು"** ಎಂಬ ಹೆಸರಿನಿಂದ ಪ್ರಕಟಿಸಲಾಗಿದೆ.

### ಈ ವರ್ಷದ ಕೆಲಸ

ಈ ವರ್ಷದಲ್ಲಿ ಹೊರಗಿನ ನೋಟಕ್ಕೆ ನಾವು ಇನ್ನೂ ಸಂಘವನ್ನು ಆರಂಭಿ ಸಿಲ್ಲ. ಆದರೆ ನಮ್ಮ **"ಜನಪ್ರಿಯ ವಿಜ್ಞಾನ"**ದ ತಿಳಿವಳಿಕೆಗಳನ್ನು ನೋಡಿರು

ವವರ ಪಾಲಿಗೆ, ಅದನ್ನು ಬರೆಯಲು ತೊಡಗಿರುವವರ ಪಾಲಿಗೆ, ಸಂಘ ತನ್ನ ಕೆಲಸ ಆರಂಭಿಸಿ ಎರಡು ತಿಂಗಳ ಮೇಲಾಯಿತು. ಇದುವರೆಗೆ ಬಂದಿರುವ ಜನಪ್ರಿಯ ವಿಜ್ಞಾನದ ಎಸ್ಸೆಗಳನ್ನು ತಿದ್ದಿ ಪ್ರಕಟಿಸುವ ಒಂದು ಉದ್ಯೋಗ ಈ ವರ್ಷಕ್ಕೆ ಸಾಕಾಗುವಷ್ಟು ಕೆಲಸ ಎನ್ನಬಹುದು.

ಅಲ್ಲದೆ, ನಮ್ಮ ಸೋದರ ಸಂಸ್ಥೆಯೊಂದರ ವ್ಯಾಸಂಗಗೋಷ್ಠಿಗೆ ನಮ್ಮ ಸಂಘ ಒಂದು ರೀತಿಯಾಗಿ ನೆರವಾಗಿದೆ. ಬೆಂಗಳೂರು ಬಸವನಗುಡಿಯಲ್ಲಿರುವ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗಗೋಷ್ಠಿಯವರು ಪ್ರಕಟಿಸಿದ ಶ್ರೀಮಾನ್ ಜಿ. ಪಿ. ರಾಜರತ್ನಂ ಅವರ **"ಶ್ರೀ ಬಾಹುಬಲಿ ವಿಜಯಂ"** ಎಂಬ ನಾಟಕದ ಐನೂರು ಪ್ರತಿಗಳಿಗೆ ಬೆಲೆ ಬಾಳುವಷ್ಟು ನಮ್ಮ ಪ್ರಕಟನೆಗಳನ್ನು ಬದಲು ಕೊಟ್ಟು, ಆ ಬದಲುಪ್ರತಿಗಳನ್ನು ಮಾರುವ ಹೊಣೆಯನ್ನು ನಾವೇ ಹೊತ್ತು, ಅದರಿಂದ ಬಂದ ಹಣವನ್ನು ಅವರಿಗೆ ಕೊಟ್ಟು, ಅವರ ಆ "ಬಾಹುಬಲಿ ವಿಜಯ"ವನ್ನು ನಮ್ಮ ಪುಸ್ತಕಗಳ ಜೊತೆಯಲ್ಲಿ ಈಗ ನಾವೂ ಮಾರಾಟಮಾಡುತ್ತಿದ್ದೇವೆ. ಈ ವ್ಯವಹಾರದಿಂದ ಅವರಿಗೆ ಅನುಕೂಲವಾಗಿರುವುದಲ್ಲದೆ, ನಮಗೂ ಇದರಿಂದ ಒಂದಿಷ್ಟು ದಳ್ಳಾಳಿ ದೊರೆಯುತ್ತಿದೆ.

ಮತ್ತು, ಕೆಲವು ತಿಂಗಳಿಂದ ನಮ್ಮ ಕಾಲೇಜಿನಲ್ಲಿ ನಿತ್ಯಪ್ರಾರ್ಥನೆಯ ಪದ್ಧತಿ ನಡೆಯುತ್ತ ಬಂದಿದೆಯಲ್ಲವೆ. ಅದಕ್ಕೆ ಹೊಂದಿಕೊಂಡಂತೆ ಈಗ **'ಸುಪ್ರಭಾತವ್'** ಪುಸ್ತಕವನ್ನು ನಮ್ಮ ಸದಸ್ಯರಿಗೆ ಕೊಟ್ಟಿದ್ದೇವೆ.

ಅಚ್ಚಿನ ಮನೆಯಲ್ಲಿ ಇನ್ನೊಂದು ಪುಸ್ತಕ ಆಗುತ್ತ ಇದೆ: ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಸಂಘವು ಪ್ರಕಟಿಸಿದ **"ಸೋಕ್ರಟೀಸನ ಮರಣ."** ಲಾರೆನ್ಸ್ ಹೌಸ್‌ಮನ್ನನ ಇಂಗ್ಲಿಷ್‌ಕೃತಿಯಿಂದ ಶ್ರೀಮಾನ್ ಎಸ್. ಜಿ. ಶಾಸ್ತ್ರಿ ಅವರು ಕನ್ನಡಿಸಿದ ಈ ನಾಟಕವನ್ನು ವಿಚಾರಪರರು ಪುನಃ ಕೇಳುತ್ತಿರುವ ಕಾರಣ ಅದು ಪುನರ್ಮುದ್ರಿತವಾಗುತ್ತಿದೆ. ಸುಮಾರು ಡಿಸೆಂಬರ್ 54ಕ್ಕೆ ಬರಬಹುದು.

ಜನವರಿ 55ಕ್ಕೆ **"ಜನಪ್ರಿಯ ವಿಜ್ಞಾನ"** ಬರುತ್ತದೆ.

ಈ ಮಧ್ಯೆ ಸಂಘದ ಇತರ ಚಟುವಟಿಕೆಗಳ ಶಾಸ್ತ್ರವೂ ಆಗುತ್ತದೆ. ಅದು ಪೂರ್ತಿಯಾಗಿ ನಿಲ್ಲಲು ಬಿಡಬಾರದು.

## ನಮ್ಮ ಹಣಕಾಸು

ಇದುವರೆಗೆ ನಮ್ಮ ಕಾರ್ಯಕಲಾಪಗಳನ್ನು ಕುರಿತು ಹೇಳಿದ್ದಾಯಿತು. ಇನ್ನು ಅದಕ್ಕೆ ಸಂಬಂಧಿಸಿದ ಹಣಕಾಸುಗಳನ್ನು ಪ್ರಸ್ತಾಪಿಸಲಾಗುತ್ತದೆ. ಓದುವುದಕ್ಕೆ ಸುಗಮವಾಗಿರಲೆಂದು ರೂ. ಆ. ಕಾಸುಗಳನ್ನು ಹತ್ತಿರದ ಉಂಡೆ ರೂಪಾಯಿಗಳಾಗಿ ಹೇಳುತ್ತ ಹೋಗಲಾಗುವುದು.

**ಮೊದಲು ವ್ಯಯ ಹೇಳುತ್ತೇನೆ:** ಇದು ಆರು ವರ್ಷಕ್ಕೆ ಸುಮಾರು ರೂಪಾಯಿ.

| | |
|---|---|
| 1. ಸಂಘದಲ್ಲಿ ಭಾಷಣ ವಾಚನ ಮುಂತಾದ ಕಾರ್ಯಕ್ರಮಗಳು, ಹಸ್ತಪತ್ರಿಕೆಗಳು, ಬಿಲ್‌ಬುಕ್ ಮುಂತಾದುವನ್ನು ಅಚ್ಚು ಮಾಡಿಸುವುದು ಇತ್ಯಾದಿಗಳಿಗೆ .... .... | 600 |
| 2. ಸ್ಪರ್ಧೆಗಳಲ್ಲಿ ಬಹುಮಾನ ಕೊಟ್ಟದ್ದು .... | 550 |
| 3. ಸ್ಮರಣೆ, ಮಾಲವಿಕಾಗ್ನಿಮಿತ್ರ, ಮೊನ್ನವನ್ನ, ನಾಗನ ಪದಗಳು, ಬಾಲ ಸರಸ್ವತಿ, ಚಿನ್ನದ ದೋಸೆ, ನಮ್ಮನಮ್ಮವರು, ಶಕ್ತಿ, ಮಕ್ಕಳ ಮಾತು, ಪಚ್ಚೆಯ ತೆನೆ, ಗಂಧದ ಹುಡಿ, ದುರಾಸೆಯ ದಂಡ, ಸುಪ್ರಭಾತಮ್ ಇವುಗಳ ಪ್ರಕಟನದ ವೆಚ್ಚ .... | 9,800 |
| 4. ಮೇಲಿನ ಹದಿಮೂರು ಪುಸ್ತಕಗಳ ಮೇಲ್ವಿಚಾರಣೆಗಾಗಿ ಪ್ರೆಸ್ಸಿಗೆ ಓಡಿಯಾಡಿದ್ದರ ವೆಚ್ಚ · .... .... | 220 |
| 5. ಪುಸ್ತಕಗಳ ಪ್ರಚಾರ, ಮಾರಾಟ, ಬಾಕಿ ವಸೂಲು ಮಾಡುವುದು ಇವುಗಳಿಗಾಗಿ ಆದ ವೆಚ್ಚ .... .... | 360 |
| 6. ಸ್ಮರಣೆ, ಮಾಲವಿಕಾಗ್ನಿಮಿತ್ರ, ಮೊನ್ನವನ್ನ, ನಾಗನ ಪದಗಳು, ಶಕ್ತಿ—ಇವುಗಳಿಗೆ ಕೊಟ್ಟ ಸಂಭಾವನೆ .... | 1,875 |
| 7. ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಗೆ, 500 ಪ್ರತಿ 'ಶ್ರೀ ಬಾಹುಬಲಿ ವಿಜಯಂ'ಗಾಗಿ ಕೊಟ್ಟದ್ದು .... | 500 |

ಎಂದರೆ, ಸುಮಾರು ಹದಿಮೂರು ಸಾವಿರದ ಒಂಭೈನೂರು ರೂಪಾಯಿಗಳನ್ನು ಈ ಆರು ವರ್ಷದ ನಮ್ಮ ಕಾರ್ಯಗಳಿಗಾಗಿ ಖರ್ಚು ಮಾಡಿರುತ್ತೇವೆ.

**ಇಷ್ಟು ಖರ್ಚಿಗೆ ಹಣ ಎಲ್ಲಿತ್ತು? ಹಣ ಹೇಗೆ ಬಂತು?**

14—9—48ರಲ್ಲಿ ಸಂಘ ನನ್ನ ಕೈಗೆ ಬಂದಾಗ, ಬ್ಯಾಂಕಿನಲ್ಲಿ ರೂ. 2043—9—3 ಇತ್ತೆಂದು ಮೇಲೆ ಹೇಳಿದ್ದೇನೆ. ಅದನ್ನು ಮುಟ್ಟದೆ, ಸಂಘದಲ್ಲಿ

ಇದ್ದ ಪುಸ್ತಕಗಳನ್ನು ಮಾರಿ, ಸಂಘಕ್ಕೆ ಬರಬೇಕಾಗಿದ್ದ ಬಾಕಿಗಳನ್ನು ವಸೂಲು ಮಾಡಿ, ನಮ್ಮ ವರ್ಷ ವರ್ಷದ ಖರ್ಚುಗಳು ಕಳೆದು, ಹೊಸ ಪ್ರಕಟನೆಗಳಿಗೆ ನಾವು ಬಲಗಾಲೆತ್ತಿ ಮುಂದಿಟ್ಟಾಗ, 14—8—51ರಲ್ಲಿ ನಮಗೆ ಬ್ಯಾಂಕಿನಲ್ಲಿದ್ದ ನಗದು ರೂ. 2606—13—9.

ಸಂಘಕ್ಕೆ ನಾನು ಬಂದ ಎರಡನೆಯ ವರ್ಷ, ಸಂಘದ ಹಳೆಯ ಕಾಗದ ಪತ್ರಗಳನ್ನು ಶೋಧಿಸುತ್ತಿರುವಾಗ, ಒಂದು ಸಾವಿರ ರೂಪಾಯಿಗಳ ಒಂದು ಫಿಕ್ಸೆಡ್ ಡಿಪಾಸಿಟ್ ರಸೀತಿ ದೊರಕಿತು. ಇದು 1945ರಲ್ಲಿ 'ಮೆಚ್ಯೂರ್' ಆಗಿ, ಇಪ್ಪತ್ತು ರೂಪಾಯಿ ಬಡ್ಡಿ ಸಮೇತ ಬ್ಯಾಂಕಿನಲ್ಲಿ 'ಸಸ್ಪೆನ್ಸ್' ಲೆಕ್ಕ ದಲ್ಲಿತ್ತು. ಆ 1020ಕ್ಕೆ ಹೆಸರುಮಾತ್ರದ ಬಡ್ಡಿಯನ್ನು ಕೇಳಿಕೊಂಡು, ಆ 1029—6—0 ಹಣವನ್ನು ಮತ್ತೆ ಮತ್ತೆ 'ಫಿಕ್ಸೆಡ್'ನಲ್ಲಿ ಹಾಕಿ, 7-7-52 ರಂದು ಅದೊಂದು ರೂ. 1092—7—0 ನಮ್ಮ ಪ್ರಕಟನೆಗಳಿಗೆ ದೊರಕಿತು.

1. ಹೀಗಾಗಿ, ನಮ್ಮ ಖರ್ಚುಗಳಿಗೆ ಮೂಲಾರಂಭವಾಗಿ ಸಂಘ ದಲ್ಲಿ ಕೈಗೆ ಎಟುಕಿಸಿಕೊಂಡದ್ದು ನಗದು .... .... 3,700

2. ಇದರಿಂದ ತೊಡಗಿದ ಪ್ರಕಟನೆಗಳು ಆದ ಹಾಗೆಲ್ಲ ಅವುಗಳ ಮಾರಾಟದಿಂದ ಇದುವರೆಗೆ ಸಂಪಾದನೆಯಾದದ್ದು .... 8,700

3. ಸಂಘದ ಸದಸ್ಯರು ಇದುವರೆಗೆ ಕೊಟ್ಟಿರುವ ಚಂದಾ ಹಣ ಒಟ್ಟು .... .... .... 1,184

4, ಕೆಲವು ಪುಸ್ತಕಭಂಡಾರಗಳು ಪುಸ್ತಕದ ಆಯ್ಕೆಗೆ ನಮ್ಮ ಸಲಹೆ ಕೇಳಿ, ನಾವು ಅವುಗಳಿಗೆ ಸುಮಾರು ನಾಲ್ಕೂವರೆ ಸಾವಿರ ರೂ.ಗಳಷ್ಟು ಪುಸ್ತಕಗಳನ್ನು ಒದಗಿಸಿ, ಆ ವ್ಯವಹಾರದಲ್ಲಿ ಸಂಪಾ ದಿಸಿದ ಕಮಿಷನ್ .... .... .... 750

5. ಸಂಘದ ಅಭಿಮಾನಿಗಳಾದ ಶ್ರೀ ವಿ. ಕೆ. ಶ್ರೀನಿವಾಸನ್, ಶ್ರೀಮತಿ ಎಚ್. ಎಸ್. ಕಾತ್ಯಾಯನಿ, ಶ್ರೀಮತಿ ಬಿ. ಇಂದಿರಮ್ಮ ಇವರು ತಾವು ಬರೆದ 'ಬುಳ್ಳನ ಬುರುಡೆ', 'ಮಾಲಾ' ಮತ್ತು 'ಪರೀಕ್ಷೆ' ಎಂಬ ಪುಸ್ತಕಗಳ ಕೆಲವು ಪ್ರತಿಗಳನ್ನು ಸಂಘಕ್ಕೆ ದಾನ ಮಾಡಿದರು. ಅದರ ಮಾರಾಟದಿಂದ ಬಂದದ್ದು .... 180

6. ಸೆಂಟ್ರಲ್ ಕಾಲೇಜಿನ ಸಸ್ಯವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಡಾಕ್ಟರ್ ಎಲ್. ನಾರಾಯಣರಾವ್ ಅವರಿಂದ .... 50

ಎಂದರೆ, ಮೇಲೆ ಹೇಳಿದ ವಿವಿಧ ಮುಖಗಳಿಂದ ನಮಗೆ ನಮ್ಮ ಕೆಲಸಕಾರ್ಯಗಳಿಗಾಗಿ, ನಮ್ಮ ಕೆಲಸಕಾರ್ಯಗಳಿಂದಾಗಿ ಸುಮಾರು ಹದಿನಾಲ್ಕು ಸಾವಿರದ ಆರುನೂರು ರೂಪಾಯಿಗಳು ಒದಗಿಬಂದಿವೆ.

## ಈಗ ಇರುವ ಸ್ವತ್ತು

ಮೇಲೆ ಆಯವ್ಯಯಗಳಲ್ಲಿ ತೋರಿಸಿರುವಂತೆ, ಉಳಿದಿರುವ ಹಣದಲ್ಲಿ ಒಂದು ಐನೂರು ರೂಪಾಯಿಗಳಷ್ಟು ಬರಬೇಕಾಗಿದೆ. ಬರುತ್ತದೆ. ಅಲ್ಲದೆ, 'ಸೋಕ್ರಟೀಸನ ಮರಣ'ಕ್ಕೆ ಬೇಕಾದ ಕಾಗದವನ್ನು ಮಿಕ್ಕ ಹಣಕ್ಕೆ ಕೊಂಡಾಗಿದೆ. ಬರಬೇಕಾದ್ದು ಬಂದಾಗ, ಆ ಪುಸ್ತಕದ ಪ್ರಕಟಣೆಗೆ ಅದು ಸಾಕಾಗುತ್ತದೆ.

ಇಷ್ಟು ಹೊರತಾಗಿ, ನಮ್ಮ ಸಂಘದಲ್ಲಿ ಈಗ ಹೇಳಿಕೊಳ್ಳುವಂಥ ಹಣವೇನೂ ಉಳಿದಿರುವುದಿಲ್ಲ. ಆದರೆ, ಸುಮಾರು ಹದಿನಾರು ಸಾವಿರ ರೂಪಾಯಿ ಬೆಲೆ ಬಾಳುವ ನಮ್ಮ ಪ್ರಕಟಣೆಗಳು ನಮ್ಮಲ್ಲಿ ಉಂಟು. ಅವು ನಿಧಾನವಾಗಿ ಆದರೂ ಎಂದಿದ್ದರೂ ಮಾರಿಹೋಗುವ ಪುಸ್ತಕಗಳೆಂದು ನಮಗೆ ಅನುಭವದಿಂದ ಬಂದ ನಂಬಿಕೆಯಿದೆ. ಆ ಪುಸ್ತಕಗಳನ್ನು ಮಾರಿದಂತೆಲ್ಲ ಮುಂದಿನ ಕೆಲಸ ತನ್ನಷ್ಟಕ್ಕೆ ತಾನೆ ರೂಪುಗೊಳ್ಳುತ್ತದೆ ಎಂಬ ಭರವಸೆಯೂ ನಮಗೆ ಉಂಟು.

## ನಮ್ಮ ಬಿನ್ನಹ

ಇಲ್ಲಿನವರೆಗೆ ನಮ್ಮ ಸಂಘದ ಕಥೆಯನ್ನು ಕುರಿತು ಓದಿರುವವರಲ್ಲಿ ನಮ್ಮದೊಂದು ಬಿನ್ನಹ. ಸಂಘವು ತನ್ನ ವಿದ್ಯಾರ್ಥಿಸದಸ್ಯರಿಗಾಗಿ ಏನು ಕೆಲಸ ಮಾಡುತ್ತಿದೆ, ಹೇಗೆ ಕೆಲಸ ಮಾಡುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆ. ಈ ಕೆಲಸ ತಮಗೆ ಒಪ್ಪಿಗೆಯಾಗಿದ್ದರೆ, ಇಂಥ ಕೆಲಸ ಇನ್ನೂ ಆಗಬೇಕೆನ್ನಿಸಿದರೆ, ಇದಕ್ಕೆ ತಮ್ಮ ಸಹಾಯ ಸಹಕಾರಗಳು ಸಲ್ಲಬೇಕು.

ವಿದ್ಯಾರ್ಥಿಗಳನ್ನು ನಾವು ಕೇಳಿಕೊಳ್ಳುವುದು ಇಷ್ಟು: ನೀವು ವಿವಿಧವಾದ ವಿಷಯಗಳನ್ನು ಚೆನ್ನಾಗಿ ಓದಿ, ಕೇಳಿ, ತಿಳಿಯಿರಿ; ತಿಳಿದದ್ದನ್ನು ಚೆನ್ನಾಗಿ ವಿಚಾರಮಾಡಿ ಸ್ಪಷ್ಟಪಡಿಸಿಕೊಳ್ಳಿ; ಸ್ಪಷ್ಟವಾದದ್ದನ್ನು ಭಾಷಣಗಳ ಮೂಲಕವೂ

ಬರವಣಿಗೆಯ ಮೂಲಕವೂ ಖಚಿತಪಡಿಸಿಕೊಳ್ಳಿ. ಈ ವಿದ್ಯಾರ್ಥಿಕರ್ತವ್ಯಗಳಿಗೆ ಅವಕಾಶಗಳನ್ನು ಒದಗಿಸಿಕೊಡುವುದಕ್ಕಾಗಿಯೇ ಮೂವತ್ತಾರು ವರ್ಷಗಳ ಹಿಂದೆ ಹಿರಿಯರು ಈ ಸಂಘವನ್ನು ಸ್ಥಾಪಿಸಿ ಬೆಳಸಿದರು ಎಂಬುದನ್ನು ಮರೆಯಬೇಡಿ. ಸಂಘ ನಿಮ್ಮದು, ನಿಮಗಾಗಿ ಇರುವುದು. ಸಂಘಕ್ಕೆ ಎಂಟಾಣೆ ಕೊಟ್ಟು ಸದಸ್ಯರಾಗುವುದು ಕಷ್ಟವಾಗಬಾರದು.

ವಿದ್ಯಾರ್ಥಿಗಳ ಹಿತದಲ್ಲಿ ಆಸಕ್ತಿಯುಳ್ಳ ಮಹನೀಯರನ್ನೂ ಮಹಿಳೆಯರನ್ನೂ ನಾವು ಹೀಗೆ ಪ್ರಾರ್ಥಿಸುತ್ತೇವೆ: ನಿಮ್ಮ ಕಣ್ಣುಮುಂದಿನ ಮಕ್ಕಳು ಈ ಸಂಘದಲ್ಲಿ ಮಾಡುತ್ತಿರುವ ಮಂಗಳಕಾರ್ಯಗಳನ್ನು ಗಮನಕ್ಕೆ ತಂದುಕೊಂಡು, ಅವರನ್ನು ಪ್ರೋತ್ಸಾಹಿಸಿ ಮುಂದಕ್ಕೆ ನಡಸಿಕೊಡಿ. ಅವರ ಕಾರ್ಯಗಳಿಗೆ ಕ್ಷೇತ್ರವಾಗಿರುವ ಈ ಕರ್ಣಾಟಕ ಸಂಘದ ಪ್ರಕಟನೆಗಳನ್ನು ಕೊಂಡುಕೊಳ್ಳುವುದರ ಮೂಲಕ ಸಂಘಕ್ಕೆ ಆರ್ಥಿಕಬಲವನ್ನು ಒದಗಿಸಿ, ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಸಹಾಯಕರಾಗಿ.

ಸಂಘವು ಇದುವರೆಗೆ ಹೇಗೋ ಹಾಗೆ ಮುಂದೆಯೂ ಇದಕ್ಕಿಂತ ಅತಿಶಯವಾಗಿ ಕೆಲಸಮಾಡುವ ಶಕ್ತಿಯನ್ನು ಶ್ರೀ ದೇವರು ಅನುಗ್ರಹಿಸಲೆಂದು ಬೇಡುತ್ತ, ನಮ್ಮ ಸಂಘದ ಕಥೆಯನ್ನು ಇಲ್ಲಿಗೆ ನಿಲ್ಲಿಸುತ್ತೇವೆ.

24-10-54
ಸೆಂಟ್ರಲ್ ಕಾಲೇಜ್

ಜಿ. ಪಿ. ರಾಜರತ್ನಂ
ಕರ್ಣಾಟಕ ಸಂಘದ ಪರವಾಗಿ

---

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ೨.

## ಬೆಂಗಳೂರು ಸೆಂಟ್ರಲ್ ಕಾಲೇಜ್

# ಕರ್ಣಾಟಕ ಸಂಘದ ಪ್ರಕಟನೆಗಳು

---

೧. **ಶ್ರೀ ಕೈಲಾಸಂ ಅವರ ಸ್ಮರಣೆ** ರೂ. ೨/೪
ಶ್ರೀ ಕೆ. ವಿ. ಅಯ್ಯರ್ ಬರೆದದ್ದು.

೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ** ರೂ. ೧/೧೨
ಆಸ್ಥಾನ ವಿದ್ವಾನ್ ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳ ಅನುವಾದ.

೩. **ಮೊನ್ನ ವನ್ನ** (ಮೂರು ಅಂಕಗಳ ನಾಟಕ) ರೂ. ೨/-
ಬೆಲ್ಜಿಯಂ ದೇಶದ ಮಾರಿಸ್ ಮ್ಯಾಟರ್‌ಲಿಂಕ್ ಮಹಾಕವಿಯ ನಾಟಕದ ಅನುವಾದ. ಶ್ರೀ ಎಸ್. ಜಿ. ಶಾಸ್ತ್ರೀ ಅವರು ಮಾಡಿದ್ದು.

೪. **ನಾಗನ ಪದಗಳು** ರೂ. ೧/೪
ಶ್ರೀ ಜಿ. ಪಿ. ರಾಜರತ್ನಂ ಬರೆದವು. 'ರತ್ನನ ಪದಗಳು' ಜಾತಿಯವು.

೫. **ಬಾಲ ಸರಸ್ವತಿ** (೩೬ ಬೇರೆ ಬೇರೆ ಕೃತಿಗಳು) ರೂ. ೨/೮
ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಸದಸ್ಯರಿಂದ.

೬. **ನಮ್ಮ ನಮ್ಮವರು** (೬೬ ಬೇರೆ ಬೇರೆ ಕೃತಿಗಳು) ರೂ. ೨/೮
ಮೈಸೂರು ವಿಶ್ವವಿದ್ಯಾನಿಲಯದ ಇಂಟರ್ ವಿದ್ಯಾರ್ಥಿಗಳಿಂದ.

೭. **ಚಿನ್ನದ ದೋಸೆ ಮುತ್ತು ಇತರ ಕಥೆಗಳು** ಹನ್ನೆರಡಾಣೆ
ಸಂಘದ ಸದಸ್ಯರು ಸಂಗ್ರಹಿಸಿದ ಎಂಟು ಜಾನಪದ ಕಥೆಗಳು.

೮. **ಶಕ್ತಿ** (ಸಚಿತ್ರ) ರೂ. ೩/-
ಶ್ರೀ ಆರ್. ಎಲ್. ನರಸಿಂಹಯ್ಯ ಅವರ ವಿಜ್ಞಾನ ಗ್ರಂಥ.

೯. **ಮಕ್ಕಳ ಮಾತು** (ಕಾಲೇಜ್ ಬರವಣಿಗೆ-೧) ರೂ. ೧/-

೧೦. **ಪಚ್ಚೆಯ ತೆನೆ** (ಕಾಲೇಜ್ ಬರವಣಿಗೆ-೨) ರೂ. ೧/-

೧೧. **ಗಂಧದ ಹುಡಿ** (ಕಾಲೇಜ್ ಬರವಣಿಗೆ-೩) ರೂ. ೧/-

೧೨. **ದುರಾಸೆಯ ದಂಡ** (ಐದು ಏಕಾಂಕ ನಾಟಕಗಳು) ರೂ. ೧/೪

೧೩. **ಸುಪ್ರಭಾತಮ್** (ದೈವಭಕ್ತಿಯನ್ನು ಕುರಿತ ಪ್ರಬಂಧಗಳು) ರೂ. ೧/-

---

**ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು**

# REPORT.



## Karnataka Samgha

I ESTD 1918 by Sri A R Krishna Sastri. Uninterrupted work of 36 years.

II In addition to the routine programme of lectures, Readings, Competitions Etc., the Samgha has specialised in publications eg. 13 vols of Prabuddha Karnataka, and over a Score of other books that have made their mark in Modern Literature.

III Recent advance is: "College Writing" 8 Books - totalling a 1000 Pages - representing the best literary talent in This College. "ಕಾಲೇಜು ಬರವಣಿಗೆ"

IV Our Latest publication: "ಜನಪ್ರಿಯ ವಿಜ್ಞಾನ". Popular Science. Written by our Students, and edited by our Staff.

V Please Visit the Samgha Book Exhibition in the Botany BLOCK.

GPR

UNIVERSITY OF MYSORE.

Central College, Bangalore,
13th January 1955

# KARNATAKA SANGHA
# REPORT.

I. Established 1918 by Sri A.R.Krishna Sastri, uninterrupted work of 36 years.

II In addition to the routine programme of lectures, Readings, competitions etc. the Sangha has specialised in publications e.g. 13 volumes of Prabudhakaranataka, and over a score of other books that have made their mark in Modern Literature.

III. Recent advance is: "College Writing" 8 books - totalling a 1000 pages - representing the best literary talent in this College "ಕಾಲೇಜು ಬರವಣಿಗೆ".

IV. Our latest publication: "ಜನಪ್ರಿಯ ವಿಜ್ಞಾನ" Popular Science, written by our students and edited by our staff.

V. Please visit the Sangha Book Exhibition in the ~~Botany~~ Mathes. Block.

UNIVERSITY OF MYSORE.

Central College, Bangalore,
13th January 1955

KARNATAKA SANGHA
REPORT.

I. Established 1918 by Sri A.R.Krishna Sastri, uninterrupted work of 36 years.

II In addition to the routine programme of lectures, Readings, competitions etc. the Sangha has specialised in publications e.g. 13 volumes of Prabudhakarnataka, and over a score of other books that have made their mark in Modern Literature.

III. Recent advance is: "College Writing" 8 books - totalling a 1000 pages - representing the best literary talent in this College "ಕಾಲೇಜು ಬರವಣಿಗೆ".

IV. Our latest publication: " ಜನಪ್ರಿಯ ವಿಜ್ಞಾನ " Popular Science, written by our students and edited by our staff.

V. Please visit the Sangha Book Exhibition in the Botany Block.